MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 ENGLISH DAILY Subscription Yearly - Rs. - SATURDAY 26-2-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

**ಕೇರಳದಲ್ಲಿ ಕಚ್ಚಾ ಗೋಡಂಬಿ ದರ ಕೆ.ಜಿ. ಗೆ ರೂ.105 ನಿಗದಿ**

ಕಚ್ಚಾ ಗೋಡಂಬಿ ದರ ಕೆ.ಜಿ.ಗೆ ರೂ.105 ಕ್ಕೆ ಕೇರಳ ಸರಕಾರ ನಿಗದಿಗೊಳಿಸಿದೆಯೆನ್ನಲಾಗಿದೆ. ಸಹಕಾರಿ ಸಂಘಗಳ ಮುಖಾಂತರ ಖರೀದಿ ನಡೆಸಲಾಗುವುದೆನ್ನಲಾಗಿದೆ. ಆದರೆ ದರ ಗುಣಮಟ್ಟದ ಆಧಾರದಲ್ಲಿ ವ್ಯತ್ಯಾಸವಾಗಬಹುದೆನ್ನಲಾಗಿದೆ.

**ವಿಯೆಟ್ನಾಂ ಕಚ್ಚಾ ಗೋಡಂಬಿ ದರ ಹೆಚ್ಚಳ**

ಹಿಂದಿನ ವರ್ಷಕ್ಕೆ ಹೋಲಿಸಿದಾಗ ಈ ವರ್ಷ ವಿಯೆಟ್ನಾಂ ನಲ್ಲಿ ಕಚ್ಚಾ ಗೋಡಂಬಿ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ ಕೋವಿಡ್ ಸಮಸ್ಯೆ ಮತ್ತಿತರ ಕಾರಣಗಳಿಂದಾಗಿ ದರ ಇಳಿಕೆಯಾಗಿತ್ತೆನ್ನಲಾಗಿದೆ. ಈ ವರ್ಷ ವಿಯೆಟ್ನಾಂ ಹಾಗೂ ಕಾಂಬೋಡಿಯಾಗಳಲ್ಲಿ ಕಚ್ಚಾ ಗೋಡಂಬಿ ಸೀಸನ್ ವಿಳಂಬಿತವಾಗಿ ಆರಂಭವಾಗಿದೆಯೆನ್ನಲಾಗಿದ್ದು ನಂತರ ಮಳೆ ಮತ್ತಿತರ ಪ್ರತಿಕೂಲ ಹವಾಮಾನದ ಕಾರಣಗಳಿಗಿಂತ ಕಚ್ಚಾ ಗೋಡಂಬಿ ಗುಣಮಟ್ಟದ ಕುಸಿತ ಹಾಗೂ ಉತ್ಪಾದನೆ ಇಳಿಕೆಯಾಗುತ್ತಿದೆಯೆನ್ನಲಾಗಿದೆ. ಪಶ್ಚಿಮ ಆಫ್ರಿಕಾ ದೇಶಗಳಲ್ಲಿ ಬೆಳೆ ಉತ್ತಮವಿದೆಯೆನ್ನಲಾಗಿದೆ

ಭಾರತದಲ್ಲೂ ಕಚ್ಚಾ ಗೋಡಂಬಿ ಸೀಜನ್ ವಿಳಂಬಿತವಾಗಿದ್ದು ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿದೆ. ಉತ್ತಮ ಹವಾಮಾನ ಮುಂದುವರೆದಲ್ಲಿ ಉತ್ಪಾದನೆ ಗುಣಮಟ್ಟಕ್ಕೆ ಸಹಕಾರಿಯಾಗಬಹುದು.